

ಹಳದಿ ಬಣ್ಣದ ಲಘು ಮಸಾಲೆ
ಇರುವ ಗರಿಗರಿಯಾದ
ಪಾಪ್‌ಕಾರ್ನ್



ಗಾಜಿನ ತಟ್ಟೆಗೆ ನೀರು ತುಂಬಿ ಬಣ್ಣ
ಬಣ್ಣದ ಥರ್ಮಕೋಲ್ ಬಾಲ್



ಹಳದಿ ಪ್ಲಾಸ್ಟಿಕ್ ಹೂಗಳು,
ನೀಲಿ ಹಾಳೆಯ ಹೂಗಳು

ಹೀಗೆ ಹಲವಾರು ನಮೂನೆಯಲ್ಲಿ ಜೋಡಿಸಿ ಊಟದ ಮೇಜಿಗೆ ಸೊಬಗನ್ನು ನೀಡಬಹುದು.

ನಿಮಗೆ ಯಾರಾದರೂ ಅಭಿನಂದಿಸಿ ಹೂವಿನ ಬೊಕ್ಕೆಗಳನ್ನು ಕೊಟ್ಟರೇ ಆ ಹೂಗಳು ಬಾಡಿ ಹೋಗುತ್ತದೆಂದು ಚಿಂತಿಸಬೇಡಿ. ತಟ್ಟೆಯಲ್ಲಿ ಅಂದವಾಗಿ ಜೋಡಿಸಿ ಹೂಗಳ ನೋಟವನ್ನು ಕಂಪನ್ನು ಆಸ್ವಾದಿಸಿ ಸಂತಸ ಪಡಬಹುದು.

ಕೆಂಪು ಗುಲಾಬಿ ಮತ್ತು ಹಳದಿ ಹೂಗಳ ಜೋಡಣೆ

ಬೇಕಾಗುವ ವಸ್ತುಗಳು: ಕೆಂಪು ಗುಲಾಬಿ ಹೂಗಳು 26, ಹಳದೀ ಸೇವಂತಿಗೆ ಹೂಗಳು 25. ಗಾಜಿನ ತಟ್ಟೆ–1, ನೀರು.

ಹೀಗೆ ಮಾಡಿ: ತಟ್ಟೆಯಲ್ಲಿ ನೀರು ತುಂಬಿಕೊಳ್ಳಿ. ಮಧ್ಯೆ ಕೆಂಪು ಗುಲಾಬಿ ಹೂಗಳನ್ನು ಜೋಡಿಸಿ ಮತ್ತು ಐದು ಸಾಲು ಓರೆಯಾಗಿರುವಂತೆ ಇರಲಿ. ಈ ಸಾಲಿನ ಮಧ್ಯೆ ಹಳದಿ ಬಣ್ಣದ ಹೂಗಳನ್ನು ಜೋಡಿಸಿ, ನೀರು ಅಲುಗದಂತೆ ನಿಧಾನವಾಗಿ ಸರಿ ಮಾಡಿ.

ಈಗ ಅಂದವಾದ ಹೂ ಜೋಡಣೆ ಊಟದ ಮೇಜಿಗೆ ಸಿದ್ಧ.

ಹಳದೀ ಪ್ಲಾಸ್ಟಿಕ್ ಹೂಗಳು, ನೀಲಿ ಹಾಳೆಯ ಹೂಗಳು 6, ಬಿಳಿ ಹಾಳೆಯ ಹೂವು ಒಂದು, ಗಾಜಿನ ತಟ್ಟೆಯಲ್ಲಿ ಮಧ್ಯೆ ಬಿಳಿ ಹೂವನ್ನಿಟ್ಟು ಅದರ ಸುತ್ತಲೂ ನೀಲಿ ಹೂಗಳು ರೆಕ್ಕೆಗಳು ಒಂದಕ್ಕೊಂದು ಹೊಂದುವಂತೆ ಜೋಡಿಸಿ, ಸುತ್ತಲೂ ಹಳದಿ ಹೂಗಳನ್ನು ಜೋಡಿಸಿ. ಸುಂದರ ಹೂ ಜೋಡಣೆ ಸಿದ್ಧ.

ಮನೆಗೆ ತಂದ ಗುಲಾಬಿ ಹೂಗಳ ರೆಕ್ಕೆಗಳು ಎಲ್ಲಾ ಉದುರಿತೇ, ಯೋಚನೆ ಇಲ್ಲ.

ವಿಧಾನ ಇಲ್ಲಿದೆ: ಗಾಜಿನ ತಟ್ಟೆಯ ಮಧ್ಯೆ ಹಳದೀ ಬಣ್ಣದ ಜರ್ಬೆರಾ ಹೂವು ಒಂದನ್ನಿಟ್ಟು ಅದರ ಸುತ್ತಲೂ ಕೆಂಪು ಗುಲಾಬೀ ರೆಕ್ಕೆಗಳು ಹೂವಿನ ಸುತ್ತಲೂ ಬರುವಂತೆ ಜೋಡಿಸಿ. ಅದರ ಸುತ್ತಲೂ ಬಿಳಿ ಗುಲಾಬಿಯ ದೊಡ್ಡ ರೆಕ್ಕೆಗಳು ಒಂದೇ ಸಮನಾಗಿರುವುದನ್ನು ಜೋಡಿಸಿ. ತಟ್ಟೆಯ ಅಂಚಿಗೆ ಒಂದೇ ಸಮನಾಗಿರುವ ಕೆಂಪು ಗುಲಾಬಿ ರೆಕ್ಕೆಗಳನ್ನು ಜೋಡಿಸಿ. ತಟ್ಟೆಯ ಅಂಚಿಗೆ ಒಂದೇ ಕಡೆಯಿಂದ ನಿಧಾನವಾಗಿ ನೀರನ್ನು ಸುರಿಯಿರಿ. ರೆಕ್ಕೆಗಳು ಸ್ವಲ್ಪವೂ ಅಲುಗಾಡದಂತಿರಲಿ. ತಟ್ಟೆಯ ಮೇಲ್ಭಾಗದಲ್ಲಿ ರೆಕ್ಕೆಗಳು ಜೋಡಿಸಿದಂತೆ ಕಾಣುವವರೆಗೂ ನೀರನ್ನು ತುಂಬಿ. ಇದೊಂದು ನೋಟ ಆದರೆ.

ಇನ್ನೊಂದು ತಟ್ಟೆಲ್ಲಿ ಕೆಂಪು ಜರ್ಬೆರಾ ಮಧ್ಯೆ ಇರಲಿ ಮತ್ತು ಚಿಕ್ಕ ಬಿಳಿ ಹೂ ಗೊಂಚಲು, ಅಂಚಿಗೆ ಕೆಂಪು ಗುಲಾಬಿ ರೆಕ್ಕೆಗಳಿಂದ ಇನ್ನೊಂದು ನಮೂನೆ ಮಾಡಬಹುದು.

ಹಳದೀ ಬಣ್ಣದ ಲಘು ಮಸಾಲೆ ಇರುವ ಗರಿಗರಿಯಾದ ಪಾಪ್‌ಕಾರ್ನ್ ಒಂದು ಬಟ್ಟಲು. ಕಾರದಪುಡಿ, ಮಸಾಲೆ ಹಾಕಿದ ಪಾಪ್‌ಕಾರ್ನ್ 2 ಹಿಡಿ ಇರಲಿ. ಚಿತ್ರದಲ್ಲಿರುವಂತೆ ಹಳದಿ ಪಾಪ್‌ಕಾರ್ನ್ ತಟ್ಟೆಯ ತುಂಬಾ ಹರಡಿ, ಮಧ್ಯೆ ವರ್ತುಲದಂತೆ ಕೆಂಪು ಪಾಪ್‌ಕಾರ್ನ್ 1 ಸಾಲು ಬರುವಂತೆ ಜೋಡಿಸಿ. ಮಕ್ಕಳಿಗೆ ನೋಡಲೂ ಚೆನ್ನ ತಿನ್ನಲೂ ರುಚಿ.

ಗಾಜಿನ ತಟ್ಟೆಗೆ ನೀರು ತುಂಬಿ ಬಣ್ಣ ಬಣ್ಣದ ಥರ್ಮಕೋಲ್ ಬಾಲ್ಸ್ ಅನ್ನು ಉದುರಿಸಿ ತಟ್ಟೆ ತುಂಬುವಂತೆ ಮಾಡಿ. ಇದು ನೋಡಲು ಚೆನ್ನ. ಹೀಗೆ ದಿನಕ್ಕೊಂದು ನಮೂನೆಯಂತೆ ಸ್ವಾಭಾವಿಕ ಹೂಗಳೊಂದೇ ಅಲ್ಲದೆ ಕೃತಕ ಹೂಗಳೂ ಅಥವಾ ಬೇರೆ ವಸ್ತುಗಳಿಂದಲೂ ತಟ್ಟೆಲ್ಲಿ ಜೋಡಿಸಿ ಮನೆಯ ಅಂದ ಹೆಚ್ಚಿಸಿ ಮಕ್ಕಳಿಗೂ ಒಳ್ಳೆಯ ಉಪಯೋಗವಾದಂತಾಯಿತಲ್ಲವೇ?

■